

**ಇಟಲಿಯಲ್ಲಿ ನಿಮ್ಮನ್ನು ಹೇಗೆ ಗುರುತಿಸುವರು ?**

ಇಟಲಿಯಲ್ಲಿ ಭಾರತೀಯ ಸಮುದಾಯದವರು ನನ್ನನ್ನು ಅವರಲ್ಲೊಬ್ಬಳೆಂದು ಪರಿಗಣಿಸುತ್ತಾರೆ. ಚೆನ್ನೈಯಲ್ಲಿಯೂ ಈಗ ನಾನು ಇವರೆಲ್ಲರ ಪೈಕಿ ಒಬ್ಬಳು ಕಲಾವಿದೆಯೇ ವಿನಃ ಇಟಲಿಯವಳು ಎಂಬ ಪ್ರತ್ಯೇಕತೆ ಅಳಿಸಿಹೋಗಿದೆ. ಆದರೆ ಇಲ್ಲಿ ನಾನು ಭಾರತೀಯ ಸಂಸ್ಕೃತಿಯ ಕನ್ನಡಿಯಿದ್ದಂತೆ ಎನ್ನಬಹುದು. ಉದಾಹರಣೆಗೆ, ಎಷ್ಟೋ ಮಂದಿ ಭಾರತೀಯರು ಇಲ್ಲಿ ನನ್ನ ಪ್ರಯತ್ನಗಳನ್ನು ಗಮನಿಸಿ, ಈ ಕ್ಷೇತ್ರದಲ್ಲಿ ಕಲಿಯಬಹುದಾದ್ದು ಇದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದು. ಭಾರತೀಯರ ಸಂಸ್ಕೃತಿಯು ನನ್ನಲ್ಲಿ ಪ್ರತಿಫಲಗೊಂಡು ಅವರನ್ನು ತಲುಪಬಹುದು. ಅದೇ ವೇಳೆಗೆ ಇಟಲಿಯಲ್ಲಿ ಅನೇಕರಿಗೆ, ಹೀಗೊಂದು ಖಂಡಾಂತರ ಪ್ರಯತ್ನವು ಕಾರ್ಯಸಾಧುವಾಗಿದೆ ಎಂಬ ವಿಶ್ವಾಸ ಮೂಡಿಸಬಹುದು ಮತ್ತು ಭಾರತೀಯ ಸಾಂಸ್ಕೃತಿಕ ಲೋಕವು ಎಷ್ಟೊಂದು ಮುಕ್ತವಾಗಿ ಆಸಕ್ತರನ್ನು ಬರಮಾಡಿಕೊಳ್ಳುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ನಾನು ಉನ್ನತ ಅಧ್ಯಯನ ಮಾಡುವ ಉದ್ದೇಶದಿಂದ ಭಾರತಕ್ಕೆ ಬಂದೆ. ಈಗ ನನಗೆ ಅನಿಸುತ್ತದೆ, ಉನ್ನತ ವಿಚಾರಗಳು ಸಣ್ಣಸಣ್ಣ ವಸ್ತು-ವಿಷಯಗಳಲ್ಲಿ ಇರುತ್ತದೆ ಎಂದು.

**◆ ಈಗ ಜೀವನ ಹೇಗಿದೆ?**

ಜೀವನ ನೋವು ನಲಿವುಗಳ ಸಂಗಮ. ಕೆಲವೊಮ್ಮೆ ಖುಷಿ, ಕೆಲವೊಮ್ಮೆ ಬೇಸರ ಇದ್ದೇ ಇದೆ. ದುಃಖದ ಕಣ್ಣೀರಿಗಿಂತ ಸಂತೋಷದ ಕಣ್ಣೀರಿಗೆ ನಾನು ಹೆಚ್ಚು ಬೆಲೆ ಕೊಡುವೆ. ಸಾರ್ವಕಾಲಿಕ ಮತ್ತು ಸರ್ವವ್ಯಾಪಿ ಆಗಿರುವ ಭಾವನೆಗಳನ್ನು ಸ್ಪರ್ಶಿಸುವ ಸಾಮರ್ಥ್ಯ ಕಲಾಪ್ರಕಾರಗಳಿಗೆ ಇವೆ ಎನ್ನುವುದನ್ನು ತಿಳಿದು ನನಗೆ ವಿಸ್ಮಯವಾಗುತ್ತದೆ. ಅಂತಹ ಅನುಭೂತಿಯ ಸಂದರ್ಭದಲ್ಲಿ ಕಣ್ಣಲ್ಲಿ ನೀರಾಡಬಹುದು. ನಾನು ನೃತ್ಯ ಮಾಡಿದ ಬಳಿಕ ಆ ಕ್ಷಣಗಳೆಲ್ಲ ಕಳೆದುಹೋದವಲ್ಲ ಎಂದು ಕಣ್ಣಲ್ಲಿ ನೀರು ತುಂಬುವುದು.

ಈ ಜೀವವು ಎಷ್ಟೋ ಅದೃಶ್ಯ ವಸ್ತುಗಳಿಂದ ನಿರ್ಮಾಣವಾಗಿದೆ! ಭಾವನೆಗಳು, ಪ್ರೇರಣೆಗಳು, ಗ್ರಹಿಕೆ, ಅಗತ್ಯ, ಆಶೆ, ಆಕಾಂಕ್ಷೆ, ಹುಚ್ಚುತನ, ಭಕ್ತಿ...